**ಸಿ.ಸಿ.ನಂ.13722/2019**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 13-09-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ನನಗೆ ಪಕ್ಕದ ಮನೆಯವರು ಶೀಟನ್ನು ಕಿತ್ತುಹಾಕಿ ಮೋರಿಗೆ ಎಸೆದ ಬಗ್ಗೆ ತಿಳಿಸಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ದಿ.17-08-2018 ರಂದು ರಾತ್ರಿ 10-15 ಗಂಟೆಗೆ ನನಗೆ ಫೋನ್ ಮಾಡಿರುತ್ತಾರೆ. ಆ ದಿನ ನಾನು ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ. ಸದರಿ ದೂರಿನ ಪ್ರತಿ ಈ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ನೆನಪಿಲ್ಲ. ಆರೋಪಿ ದಿ.28-08-2018 ರಂದು ಅವಾಚ್ಯ ಶಬ್ದಗಳಿಂದ ಬೈಯಿದ್ದುರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಪಕ್ಕದ ಮನೆಯ ವಾಸಿ ಎಂದರೆ ಸರಿ. ನಮಗೆ ಮತ್ತು ಆರೋಪಿಗೆ ನಮ್ಮ ವಾಸದ ಮನೆಗೆ ಸಂಬಂಧಪಟ್ಟಂತೆ ಸಿವಿಲ್ ವಿವಾದ ಇತ್ತು, ಅದು ತೀರ್ಮಾನವಾಗಿದೆ. ಈ ಪ್ರಕರಣಕ್ಕಿಂತ ಮೊದಲು ಆರೋಪಿಯ ವಿರುದ್ದ ಎಷ್ಟು ದೂರುಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಅವರು ಜಗಳ ಮಾಡಲು ಬಂದಾಗಲೆಲ್ಲ ದೂರು ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು 4 ರಿಂದ 5 ಸುಳ್ಳು ದೂರುಗಳನ್ನು ಆರೋಪಿಯ ವಿರುದ್ಧ ನೀಡಿದ್ದು ಸದರಿ ದೂರುಗಳು ಆರೋಪಿ ನಿರಪರಾಧಿ ಎಂದು ತೀರ್ಮಾನವಾಗಿವೆ ಎಂದರೆ ಸರಿಯಲ್ಲ. ದಿ.28-08-2018 ರಂದು ಆರೋಪಿ ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಮತ್ತು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಗಂಡ, ನನ್ನ ತಂದೆ ಹಾಗೂ ನನ್ನ ತಮ್ಮ ದಿ.20-08-2018 ರಂದು ಆರೋಪಿಯೊಂದಿಗೆ ಅವರ ಮನೆಯ ಕಾಂಪೌಂಡ್ ಗೋಡೆಗೆ ಸಂಬಂಧಪಟ್ಟಂತೆ ಜಗಳ ಮಾಡಿ ಅವಾಚ್ಯ ಶಬ್ದಗಳಿಂದ ಬೈಯಿದ್ದುರುತ್ತೇವೆ ಎಂದರೆ

ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಆರೋಪಿ ದಿ.21-08-2018 ರಂದು ನಮ್ಮ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ದಿನ ಪೊಲೀಸರು ನಮ್ಮನ್ನು ಮತ್ತು ಆರೋಪಿಯನ್ನು ಕರೆಸಿದ್ದರು ಎಂದರೆ ಸರಿಯಲ್ಲ. ನಮ್ಮ ಮುಂದೆ ಪಿಐ ರವರು ಆರೋಪಿಗೆ ಅವಾಚ್ಯ ಶಬ್ದಗಳಿಂದ ಬೈಯ್ದುರು ಎಂದರೆ ಸರಿಯಲ್ಲ. ದಿ.28-08-2018 ರಂದು ಆರೋಪಿ ಮೇಲಾಧಿಕಾರಿಗಳಿಗೆ ನಮ್ಮ ವಿರುದ್ಧ ಹಾಗೂ ಠಾಣಾ ಪಿಐ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ಠಾಣಾ ಪಿಐ ರವರಿಗೆ ತಿಳಿದ ತಕ್ಷಣ ನನ್ನ ಕಡೆಯಿಂದ ಸುಳ್ಳು ದೂರು ಪಡೆದು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ.

ಆರೋಪಿ ದಿ.27-08-2018 ರಂದು ನನ್ನ ಮತ್ತು ನನ್ನ ಗಂಡನ ವಿರುದ್ಧ ಹಾಗೂ ಠಾಣಾ ಪಿಐ ವಿರುದ್ಧ ಖಾಸಗಿ ದೂರು ನಂ.289/2018 ಅನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾವು ವಾಸವಿರುವ ಸ್ಥಳ ಬಿಬಿಎಂಪಿಗೆ ಸೇರಿದ್ದು ಅದು ಬೀಳುವ ಸ್ಥಿತಿಯಲ್ಲಿದ್ದು ಅದನ್ನು ಕೆಡವಿ ಹಾಕುವಂತೆ ಆರೋಪಿ ಬಿಬಿಎಂಪಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ಆಧಾರದ ಮೇಲೆ ದಿ.31-08-2017 ರಂದು ಬಿಬಿಎಂಪಿಯವರು ನಾವಿದ್ದ ಮನೆಯನ್ನು ಕೆಡವಿ ಹಾಕುವಂತೆ ಹೇಳಿ ನೋಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿ ಆ ಬಗ್ಗೆ ದೂರು ಕೊಟ್ಟ ಕಾರಣ ದ್ವೇಷ ತೀರಿಸಿಕೊಳ್ಳಲು ಈ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಿಪಿ.2 ಕ್ಕೆ ನಾನು ಸಹಿಯನ್ನು ಠಾಣೆಯಲ್ಲಿಯೇ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಹೇಳಿರುವ ಮಾಹಿತಿಯನ್ನು ನಾನು ಮತ್ತು ನನ್ನ ಯಜಮಾನರು ಹೇಳಿ ಬರೆಸಿರುತ್ತೇವೆ. ಸದರಿ ದಾಖಲೆಗೆ ನನ್ನ ಯಜಮಾನರ ಸಹಿ ಇರುವುದಿಲ್ಲ. ಪಂಚನಾಮೆ ಮಾಡುವಾಗ ನಾನು, ನನ್ನ ಗಂಡ, ಪೊಲೀಸರು, ಇಬ್ಬರು ಹುಡುಗರು ಮತ್ತು ಇತರರು ಇದ್ದರು. ನನ್ನ ಸಮಕ್ಷಮ ಇಬ್ಬರು

ಹುಡುಗರು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಪೊಲೀಸರು ದಿ.28-08-2018 ಹಾಗೂ 29-08-2018 ರಂದು ಬಂದಿದ್ದರು. ಅವರ ಹೆಸರು ವೀರಪ್ಪ. ಪೊಲೀಸರು ಸ್ಥಳ ತೋರಿಸುವಂತೆ ಕೇಳಿ ನನಗೆ ಯಾವುದೇ ನೋಟೀಸ್ ಕೊಟ್ಟಿರುವುದಿಲ್ಲ. ಒಡೆದುಹೋಗಿದ್ದ ಶೀಟು ಅಥವಾ ಇತರೇ ಯಾವುದೇ ವಸ್ತುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ.3 ಮತ್ತು 4 ಭಾವಚಿತ್ರಗಳು ಹಳೆಯ ಭಾವಚಿತ್ರಗಳಂತೆ ಕಾಣುತ್ತಿವೆ ಎಂದರೆ ಸರಿಯಲ್ಲ . ಪೊಟೋದಲ್ಲಿ ಯಾವುದೇ ಜಿಂಕ್ ಶೀಟ್ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಒಡೆದು ಹೋಗಿದ್ದ ಜಿಂಕ್ ಶೀಟ್ ಗೂ ಪೋಟೋದಲ್ಲಿ ಕಾಣುವ ಜಿಂಕ್ ಶೀಟ್ ಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸ್ಥಳದಲ್ಲಿ ಪೊಲೀಸರು ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಆ ದಿನ ಘಟನಾ ಸ್ಥಳಕ್ಕೆ ಬಂದಿಲ್ಲ ಆಗ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಶೀಟ್ ಒಡೆದುಹೋಗಿರಲಿಲ್ಲ ಹಾಗೂ 20 ಸಾವಿರ ನಷ್ಟ ಆಗಿರಲಿಲ್ಲ ಎಂದರೆ ಸರಿಯಲ್ಲ.

ದೂರು ಕೊಡುವಾಗ ಪಕ್ಕದ ಮನೆಯವರು .....................................

..........................................................................................................

ಹೋಗಿ ದೂರು ಕೊಟ್ಟೆವು ಎಂಬ ಮಾಹಿತಿಯನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ನಮ್ಮ ಮನೆಯ ಬಳಿ ಬಂದು ...................

.......................................................................................................

ಹಲ್ಲೆ ಮಾಡಲು ಪ್ರಯತ್ನ ಪಟ್ಟರು ಎಂಬ ವಿಷಯವನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಹಲ್ಲೆ ಮಾಡಿಲ್ಲ ಹಾಗೂ ಬಟ್ಟೆ ಬಿಚ್ಚಿಸಿ ಬೆತ್ತಲೆಯಾಗಿ ಮೆರವಣಿಗೆ ಮಾಡುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ಕಪಕ್ಕದವರು ಆರೋಪಿಗೆ ಹೆದರಿ ಯಾರು ಬರುವುದಿಲ್ಲ. ಸದರಿ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿ. ಎಸಿಪಿ

ಕಚೇರಿಯಲ್ಲಿ ಮಂಜುನಾಥರವರು ಇದ್ದು ಅವರ ಮಾತು ಕೇಳಿ ನಾನು ಸುಳ್ಳು ದೂರುಗಳನ್ನು ಕೊಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಆರೋಪಿ ವಿರುದ್ಧ ಆಗಾಗ ಸುಳ್ಳು ದೂರು ಕೊಡುತ್ತೇನೆ ಎಂದರೆ ಸರಿಯಲ್ಲ. ದಿ.17-08-2018 ಹಾಗೂ 28-08-2018 ರಂದು ಯಾವುದೇ ಘಟನೆ ಆಗಿಲ್ಲದಿದ್ದರೂ ಸಹ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8 ನೇ ಅ. ಮು. ಮ. ದಂ. ನ್ಯಾ.**